ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
"ಸಾರಿಗೆ ಭವನ" ಕೇಂದ್ರ ಕಛೇರಿ,
ಕೆ.ಹೆಚ್.ರಸ್ತೆ, ಶಾಂತಿನಗರ, ಬೆಂಗಳೂರು–560 027. ಭಾರತ
ದೂರವಾಣಿ : 080-22221321 / 22221325
ವೆಬ್–ಸೈಟ್ : ksrtc.karnataka.gov.in

**Karnataka State Road Transport Corporation**
"Transport House" Central Offices,
K.H.Road, Shanthinagar, Bangalore-560 027. India
Tel : 080-22221321 / 25
Website : ksrtc.karnataka.gov.in

**ಸಂ/ಕರಾಸಾ/ಕೇಕ/ಸಂ/ಸಾಮಾನ್ಯ/ 846 /2023-24**

**ದಿನಾಂಕ: 07/06/2023**

**ಸಾಮಾನ್ಯ ಸ್ಥಾಯಿ ಆದೇಶ ಸಂಖ್ಯೆ: 818 /2023**

**ವಿಷಯ:** "ಶಕ್ತಿ ಯೋಜನೆ"ಯಡಿ ರಾಜ್ಯದ ಎಲ್ಲಾ ಮಹಿಳೆಯರಿಗೆ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗಳ ಬಸ್ಸುಗಳಲ್ಲಿ ಉಚಿತವಾಗಿ ಪ್ರಯಾಣಿಸುವ ಸೌಲಭ್ಯವನ್ನು ಒದಗಿಸುವ ಬಗ್ಗೆ.

**ಉಲ್ಲೇಖ:** 1. ಸರ್ಕಾರದ ಆದೇಶ ಸಂಖ್ಯೆ ಟಿಡಿ 18 ಟಿಸಿಬಿ 2023, ದಿನಾಂಕ: 05/06/2023
2. ಸರ್ಕಾರದ ಆದೇಶ ಸಂಖ್ಯೆ ಟಿಡಿ 18 ಟಿಸಿಬಿ 2023, ದಿನಾಂಕ: 20/05/2023

*********

ಕರ್ನಾಟಕ ಸರ್ಕಾರವು ಕರ್ನಾಟಕ ರಾಜ್ಯದ ಎಲ್ಲಾ ಮಹಿಳೆಯರಿಗೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ/ಬೆಂಗಳೂರು ಮಹಾ ನಗರ ಸಾರಿಗೆ ಸಂಸ್ಥೆ/ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ/ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ವಾಹನಗಳಲ್ಲಿ ಉಚಿತವಾಗಿ ಪ್ರಯಾಣಿಸುವ ಸೌಲಭ್ಯವನ್ನು ನೀಡುವ ಸಂಬಂಧ "ಶಕ್ತಿ ಯೋಜನೆ"ಯನ್ನು ಅನುಷ್ಠಾನಗೊಳಿಸಲು ಹಾಗೂ ದಿನಾಂಕ 11.06.2023ರಿಂದ ಜಾರಿಗೊಳಿಸಲು ಸರ್ಕಾರದ ಆದೇಶ ಸಂಖ್ಯೆ ಟಿಡಿ 18 ಟಿಸಿಬಿ 2023, ದಿನಾಂಕ 20/05/2023 ಮತ್ತು ಸರ್ಕಾರದ ಆದೇಶ ಸಂಖ್ಯೆ ಟಿಡಿ 18 ಟಿಸಿಬಿ 2023, ದಿನಾಂಕ: 05/06/2023ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಿ ಅದೇಶ ನೀಡಿರುತ್ತದೆ.

ಈ ಯೋಜನೆಯ ಮುಖ್ಯ ಅಂಶಗಳು ಈ ಕೆಳಕಂಡಂತಿವೆ.

1. ಕರ್ನಾಟಕ ರಾಜ್ಯದ(Domicile of Karnataka) ಮಹಿಳೆಯರಿಗೆ (ವಿದ್ಯಾರ್ಥಿನಿಯರು ಸೇರಿದಂತೆ) ಮಾತ್ರ ಉಚಿತ ಪ್ರಯಾಣ ಸೌಲಭ್ಯ ಅನ್ವಯಿಸುತ್ತದೆ. ಈ ಮಹಿಳಾ ಪ್ರಯಾಣಿಕರ ಪೈಕಿ 6 ವರ್ಷದಿಂದ 12 ವರ್ಷದವರೆಗಿನ ಬಾಲಕಿಯರು ಮತ್ತು ಲಿಂಗತ್ವ ಅಲ್ಪಸಂಖ್ಯಾತರು ಸಹ ಒಳಗೊಂಡಿರುತ್ತಾರೆ.
2. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ನಗರ ಸಾರಿಗೆ/ಸಾಮಾನ್ಯ ಮತ್ತು ವೇಗದೂತ (ತಡೆರಹಿತ ಸಾರಿಗೆಗಳು ಒಳಗೊಂಡಂತೆ) ಸಾರಿಗೆಗಳಲ್ಲಿ ಮಾತ್ರ ಮಹಿಳೆಯರು (ವಿದ್ಯಾರ್ಥಿನಿಯರು ಸೇರಿದಂತೆ) ರಾಜ್ಯಾದ್ಯಂತ ಉಚಿತವಾಗಿ ಪ್ರಯಾಣಿಸಲು ಅವಕಾಶ ನೀಡಲಾಗಿದೆ.
3. ಐಷಾರಾಮಿ ಬಸ್‌ಗಳಾದ ರಾಜಹಂಸ, ನಾನ್ ಎ.ಸಿ. ಸ್ಲೀಪರ್, ಎ.ಸಿ. ಸ್ಲೀಪರ್, ಐರಾವತ, ಐರಾವತ ಕ್ಲಬ್ ಕ್ಲಾಸ್, ಅಂಬಾರಿ, ಅಂಬಾರಿ ಡ್ರೀಮ್ ಕ್ಲಾಸ್, ಅಂಬಾರಿ ಉತ್ಸವ್, ಫ್ಲೈ ಬಸ್, ಇವಿ ಪ್ಲಸ್ ಸಾರಿಗೆಗಳಲ್ಲಿ ಉಚಿತ ಪ್ರಯಾಣ ಸೌಲಭ್ಯವು ಅನ್ವಯಿಸುವುದಿಲ್ಲ.
4. ಮಹಿಳಾ ಪ್ರಯಾಣಿಕರಿಗೆ ಪ್ರಯಾಣ ದೂರದ ಯಾವುದೇ ಮಿತಿ ಇರುವುದಿಲ್ಲ. ಈ ಪ್ರಯಾಣ ಸೌಲಭ್ಯವು ರಾಜ್ಯದ ಒಳಗೆ ಪ್ರಯಾಣಿಸಲು ಮಾತ್ರ ಅನ್ವಯವಾಗುತ್ತದೆ.
5. ಅನುಬಂಧ-1 ಮತ್ತು ಅನುಬಂಧ-2ರಲ್ಲಿ ನಮೂದಿಸಿರುವ ಕೆಲವು ಆಯ್ದ ಅಂತರ ರಾಜ್ಯ ಸಾರಿಗೆಗಳನ್ನು ಹೊರತುಪಡಿಸಿ ಉಳಿದ ಅಂತರರಾಜ್ಯ ಸಾರಿಗೆಗಳಲ್ಲಿ ಮಹಿಳೆಯರು ಉಚಿತವಾಗಿ ಪ್ರಯಾಣಿಸಲು ಅವಕಾಶವಿರುವುದಿಲ್ಲ.
6. ಶಕ್ತಿ ಯೋಜನೆಯು ದೈನಿಕ ಪಾಸು, ಮಾಸಿಕ ಪಾಸು, ಸಾಂದರ್ಭಿಕ ಒಪ್ಪಂದ ಹಾಗೂ ಖಾಯಂಗುತ್ತಿಗೆ (chartered service), ಪ್ಯಾಕೇಜ್ ಮುಂತಾದ ಸೇವೆಗಳಿಗೆ ಅನ್ವಯಿಸುವುದಿಲ್ಲ.

## ನಿಗಮದ ಬಸ್ಸುಗಳಲ್ಲಿ ಪ್ರಯಾಣಿಸುವ ಮಹಿಳೆಯರು ಕರ್ನಾಟಕ ರಾಜ್ಯದ ನಿವಾಸಿಗಳೆಂಬ ಪುರಾವೆಗಾಗಿ ತೋರಿಸಬೇಕಾದ ದಾಖಲಾತಿಗಳು

ಈ ಕೆಳಕಂಡ ಯಾವುದಾದರೂ ಒಂದು ಮೂಲ ಗುರುತಿನ ಚೀಟಿ ಅಥವಾ ಡಿಜಿಲಾಕರ್ (Digilocker) ಮುಖಾಂತರ ಹಾಜರುಪಡಿಸಬೇಕಾಗಿರುತ್ತದೆ. ಈ ಗುರುತಿನ ಚೀಟಿಗಳಲ್ಲಿ ಫೋಟೋ ಮತ್ತು ಕರ್ನಾಟಕ ರಾಜ್ಯದ ವಾಸ ಸ್ಥಳ ನಮೂದಿಸಿರುವುದು ಕಡ್ಡಾಯವಾಗಿರುತ್ತದೆ.

- ಆಧಾರ್ ಕಾರ್ಡ್,
- ಚುನಾವಣಾ ಆಯೋಗ ವಿತರಿಸಿರುವ ಮತದಾರರ ಗುರುತಿನ ಚೀಟಿ,
- ಚಾಲನಾ ಪರವಾನಗಿ ಪತ್ರ (Driving licence),
- ವಾಸಸ್ಥಳ ನಮೂದಿಸಿರುವ ಭಾರತ ಸರ್ಕಾರದ ಇಲಾಖೆಗಳು/ಭಾರತ ಸರ್ಕಾರದ ಸಾರ್ವಜನಿಕ ವಲಯದ ಉದ್ದಿಮೆ/ಸಂಸ್ಥೆಗಳು(PSU's) ವಿತರಿಸಿರುವ ಗುರುತಿನ ಚೀಟಿ,
- ವಾಸಸ್ಥಳ ನಮೂದಿಸಿರುವಂತಹ ಕರ್ನಾಟಕ ಸರ್ಕಾರದ ಇಲಾಖೆಗಳು/ಕರ್ನಾಟಕ ಸರ್ಕಾರದ ಸಾರ್ವಜನಿಕ ವಲಯದ ಉದ್ದಿಮೆ/ಸಂಸ್ಥೆಗಳು ವಿತರಿಸಿರುವ ಗುರುತಿನ ಚೀಟಿ
- ಕರ್ನಾಟಕ ಸರ್ಕಾರದ ಅಂಗವಿಕಲರ ಮತ್ತು ಹಿರಿಯ ನಾಗರಿಕರ ಕಲ್ಯಾಣ ನಿರ್ದೇಶನಾಲಯದವರು ವಿತರಿಸಿರುವ ಗುರುತಿನ ಚೀಟಿ,

ಸೇವಾ ಸಿಂಧು ಮೂಲಕ ಅರ್ಜಿಗಳನ್ನು ಪಡೆದು ಶಕ್ತಿ ಸ್ಮಾರ್ಟ್ ಕಾರ್ಡ್ ಗಳನ್ನು ವಿತರಿಸುವವರೆಗೆ ಮೇಲೆ ತಿಳಿಸಿರುವ ಗುರುತಿನ ಚೀಟಿಗಳನ್ನು ಪರಿಗಣಿಸಿ "ಶೂನ್ಯ" ಮೊತ್ತದ "ಮಹಿಳೆಯರ ಉಚಿತ ಟಿಕೇಟ್‌ಗಳನ್ನು" ವಿತರಿಸುವುದು.

## ನಿರ್ವಾಹಕರ ಜವಾಬ್ದಾರಿಗಳು

1. ಕೆಲವು ಆಯ್ದ ಅಂತರ ರಾಜ್ಯ ಸಾರಿಗೆಗಳನ್ನು ಹೊರತುಪಡಿಸಿ ಉಳಿದ ಅಂತರರಾಜ್ಯ ಸಾರಿಗೆಗಳಲ್ಲಿ ಮಹಿಳೆಯರು ಉಚಿತವಾಗಿ ಪ್ರಯಾಣಿಸಲು ಅವಕಾಶವಿರುವುದಿಲ್ಲ. ಈ ಬಗ್ಗೆ ಸಾರಿಗೆ ಪ್ರಾರಂಭವಾಗುವ ಬಸ್ ನಿಲ್ದಾಣ ಮತ್ತು ಮಾರ್ಗ ಮಧ್ಯೆ ಬರುವ ನಿಲುಗಡೆಗಳಲ್ಲಿ ವಾಹನ ಹತ್ತಲು ಬರುವ ಮಹಿಳಾ ಪ್ರಯಾಣಿಕರಿಗೆ ಮಾಹಿತಿ ನೀಡಿ ಅವರೊಂದಿಗೆ ಸೌಜನ್ಯಯುತವಾಗಿ ವರ್ತಿಸುವುದು.
2. ಈ ಯೋಜನೆಯಡಿಯಲ್ಲಿ ವಿತರಿಸುವ ಉಚಿತ ಪ್ರಯಾಣದ ಟಿಕೇಟ್ ಉಚಿತವೆಂದು ಭಾವಿಸಬಾರದು. ಈ ಟಿಕೇಟ್‌ಗಳ ವಿತರಣೆಯಿಂದ ಬರುವ ಮೊತ್ತವನ್ನು ಕರ್ನಾಟಕ ಸರ್ಕಾರವು ಮರುಪಾವತಿಸುತ್ತದೆ ಹಾಗೂ ಈ ಮೊತ್ತವನ್ನು ಸಾರಿಗೆ ಆದಾಯವೆಂದು ಪರಿಗಣಿಸಲಾಗುವುದು. ಆದುದರಿಂದ ವಾಹನದಲ್ಲಿ ಇರುವ ಎಲ್ಲಾ ಪ್ರಯಾಣಿಕರಿಗೆ ಟಿಕೇಟ್ ವಿತರಿಸುವ ಮಾದರಿಯಂತೆ ಎಲ್ಲಾ ಮಹಿಳೆಯರಿಗೆ ಹಾಗೂ ವಿದ್ಯಾರ್ಥಿನಿಯರಿಗೆ ಉಚಿತ ಶೂನ್ಯ ಮೊತ್ತದ ಟಿಕೇಟ್ ವಿತರಿಸುವುದು ಕಡ್ಡಾಯವಾಗಿರುತ್ತದೆ.
3. ನಾಲ್ಕು ಸಾರಿಗೆ ನಿಗಮ/ಸಂಸ್ಥೆಗಳ ಎಲ್ಲಾ ಸಾಮಾನ್ಯ, ನಗರ ಸಾರಿಗೆ ಮತ್ತು ವೇಗದೂತ ಸಾರಿಗೆಗಳಲ್ಲಿ ಕರ್ತವ್ಯ ನಿರ್ವಹಿಸುವ ನಿರ್ವಾಹಕರು ಬಸ್ ನಲ್ಲಿ ಪ್ರಯಾಣಿಸುವ ಮಹಿಳಾ ಪ್ರಯಾಣಿಕರ ಪ್ರಯಾಣದ ಸಮಯದಲ್ಲಿ ಮಹಿಳಾ ಪ್ರಯಾಣಿಕರು ಮೇಲ್ಕಂಡ ಯಾವುದಾದರೂ ಒಂದು ಮೂಲ ಗುರುತಿನ ಚೀಟಿಯನ್ನು ಅಥವಾ ಡಿಜಿಲಾಕರ್ (Digilocker) ಮುಖಾಂತರ ಹಾಜರುಪಡಿಸುವ ಗುರುತಿನ ಚೀಟಿಯನ್ನು ಮಾನ್ಯ ಮಾಡುವುದು . ಈ ಗುರುತಿನ ಚೀಟಿಗಳಲ್ಲಿ ಕರ್ನಾಟಕ ರಾಜ್ಯದ ವಾಸ ಸ್ಥಳ ನಮೂದಿಸಿರುವುದು ಕಡ್ಡಾಯವಾಗಿರುವುದನ್ನು ಖಚಿತಪಡಿಸಿಕೊಂಡು ಇ.ಟಿ.ಎಂ ಯಂತ್ರದಲ್ಲಿ ಅವರು ಎಲ್ಲಿಂದ ಎಲ್ಲಿಗೆ ಪ್ರಯಾಣಿಸುತ್ತಾರೆ ಹಾಗೂ ಎಷ್ಟು ಮಹಿಳಾ ಪ್ರಯಾಣಿಕರು ಎಂದು ನಮೂದಿಸಿ ಪ್ರಯಾಣದರದ "ಶೂನ್ಯ" ಮೊತ್ತದ "ಮಹಿಳೆಯರ ಉಚಿತ ಟಿಕೇಟ್‌ಗಳನ್ನು" ವಿತರಿಸುವುದು.

..3

4. ಒಂದು ಗುಂಪಿನಲ್ಲಿ ಪ್ರಯಾಣಿಸುವ ಪುರುಷ ಮತ್ತು ಮಹಿಳಾ ಪ್ರಯಾಣಿಕರಿಗೆ ಪ್ರಯಾಣದ ಟಿಕೇಟ್‌ಗಳಲ್ಲಿ ಮಹಿಳಾ ಪ್ರಯಾಣಿಕರಿಗೆ ಪ್ರತ್ಯೇಕ "ಶೂನ್ಯ" ಮೊತ್ತದ ಮಹಿಳೆಯರ ಉಚಿತ ಟಿಕೇಟುಗಳನ್ನು ವಿತರಿಸುವುದು. ಪುರುಷ ಪ್ರಯಾಣಿಕರಿಗೆ ಪ್ರತ್ಯೇಕ ಪ್ರಯಾಣ ದರದ ಟಿಕೇಟ್ ನೀಡುವುದು ಹಾಗೂ ಅವರಿಂದ ಟಿಕೇಟ್ ಮೊತ್ತ ಪಡೆಯುವುದು. ಮಹಿಳಾ ಪ್ರಯಾಣಿಕರಿಂದ ಯಾವುದೇ ಟಿಕೇಟ್ ಮೊತ್ತ ಪಡೆಯುವಂತಿಲ್ಲ.
5. ಮಹಿಳಾ ಪ್ರಯಾಣಿಕರು ಉಚಿತ ಲಗೇಜು ಮಿತಿಯನ್ನು ಹೊರತುಪಡಿಸಿ ಹೆಚ್ಚುವರಿ ಲಗೇಜು ಕೊಂಡೊಯ್ಯುತ್ತಿದ್ದಲ್ಲಿ ಅವುಗಳಿಗೆ ನಿಯಮಾನುಸಾರ ಲಗೇಜು ಚೀಟಿ ವಿತರಿಸಿ ಲಗೇಜು ದರ ವಸೂಲು ಮಾಡುವುದು.
6. ನಿಗಮದ ಚಾಲನಾ ಸಿಬ್ಬಂದಿಗಳು ನಿಗಮದ ಸಾರಿಗೆಗಳಲ್ಲಿ ಪ್ರಯಾಣಿಸುವ ಮಹಿಳಾ ಪ್ರಯಾಣಿಕರೊಂದಿಗೆ ಸೌಜನ್ಯಯುತವಾಗಿ ವರ್ತಿಸುವುದು ಹಾಗೂ ಈ ಬಗ್ಗೆ ಮಹಿಳಾ ಪ್ರಯಾಣಿಕರಿಂದ ಯಾವುದೇ ದೂರುಗಳಿಗೆ ಅವಕಾಶ ನೀಡದಂತೆ ಕರ್ತವ್ಯ ನಿರ್ವಹಿಸುವುದು. ತಪ್ಪಿದಲ್ಲಿ, ಈ ಬಗ್ಗೆ ಗಂಭೀರವಾಗಿ ಪರಿಗಣಿಸಲಾಗುವುದು.
7. ನಿಗಮದ ಚಾಲನಾ ಸಿಬ್ಬಂದಿಗಳು ಜವಾಬ್ದಾರಿಯುತವಾಗಿ ಸಂಬಂಧಪಟ್ಟ ಬಸ್ ನಿಲ್ದಾಣಗಳಲ್ಲಿ/ನಿಗದಿತ ಸ್ಥಳಗಳಲ್ಲಿ ಕಡ್ಡಾಯವಾಗಿ ನಿಲ್ಲಿಸಿ ಮಹಿಳಾ ಪ್ರಯಾಣಿಕರನ್ನು ಹತ್ತಿಸಿ/ಇಳಿಸಿ ಕಾರ್ಯಾಚರಿಸುವುದು.
8. ಬಸ್ಸುಗಳಲ್ಲಿ ಪ್ರಯಾಣಿಸುತ್ತಿರುವ ವಾಸ್ತವ ಸಂಖ್ಯೆಯ ಮಹಿಳಾ ಪ್ರಯಾಣಿಕರಿಗೆ ಮಾತ್ರ ಉಚಿತ ಟಿಕೇಟ್ ವಿತರಿಸುವುದು.
9. ಪ್ರಯಾಣದ ಸಮಯದಲ್ಲಿ ಮುಂಗಡ ಕಾಯ್ದಿರಿಸಿದ ಮಹಿಳಾ ಪ್ರಯಾಣಿಕರ ಮುಂಗಡ ಆಸನ ಕಾಯ್ದಿರಿಸಿದ ಟಿಕೇಟು ಹಾಗೂ ಗುರುತಿನ ಚೀಟಿಯನ್ನು ಕಡ್ಡಾಯವಾಗಿ ಪರಿಶೀಲಿಸುವುದು ಹಾಗೂ ಗುರುತಿನ ಚೀಟಿಯನ್ನು ಹೊಂದದಿರುವ ಮಹಿಳೆಯರಿಗೆ ಪೂರ್ಣ ಪ್ರಯಾಣದರ ಪಡೆದು ಪ್ರಯಾಣಿಸಲು ಅನುಮತಿಸುವುದು.
10. ಮಾರ್ಗ ಮಧ್ಯದಲ್ಲಿ ಇ.ಟಿ.ಎಂ ಯಂತ್ರಗಳು ದುರಸ್ಥಿಗೊಂಡಲ್ಲಿ, ಲಗೇಜು ಚೀಟಿ ಮಾದರಿಯಲ್ಲಿ ಪ್ರತ್ಯೇಕ, ಪಿಂಕ್ ಬಣ್ಣದ ಖಾಲಿ ಇರುವ ಚೀಟಿಗಳಲ್ಲಿ ಮಹಿಳಾ ಪ್ರಯಾಣಿಕರು ಎಲ್ಲಿಂದ ಎಲ್ಲಿಗೆ ಪ್ರಯಾಣಿಸಿರುತ್ತಾರೆ ಎಂಬುದನ್ನು ಬರೆದು ಚೀಟಿಗಳನ್ನು ಮಹಿಳಾ ಪ್ರಯಾಣಿಕರಿಗೆ ನೀಡುವುದು ಮತ್ತು Carbon Copy ಪ್ರತಿಯನ್ನು ಘಟಕಕ್ಕೆ ಹಿಂದುರಿಗಿಸುವುದು. ವಿತರಿಸಿರುವ ಪಿಂಕ್ ಚೀಟಿಗಳ ಸಂಖ್ಯೆಯನ್ನು ವೇಬಿಲ್‌ನಲ್ಲಿ ಪ್ರತ್ಯೇಕವಾಗಿ ನಮೂದಿಸುವುದು.
11. ಎಲ್ಲಾ ಹಂತವಾರು/ಸರತಿವಾರು ಪ್ರಯಾಣಿಸುವ ಮಹಿಳಾ ಪ್ರಯಾಣಿಕರ ಸಂಖ್ಯೆಯನ್ನು (ಪಿಂಕ್ ಚೀಟಿ ಸೇರಿಸಿ) ವೇಬಿಲ್ ನಲ್ಲಿ ಪ್ರತ್ಯೇಕವಾಗಿ ನಮೂದಿಸುವುದು.
12. ಕರ್ತವ್ಯ ಪೂರ್ತಿಗೊಂಡ ನಂತರ ಅನುಸೂಚಿಯಲ್ಲಿ ಸರತಿವಾರು ಪ್ರಯಾಣಿಸಿರುವ ಮೇಲ್ಕಂಡ ಒಟ್ಟು ಮಹಿಳಾ ಪ್ರಯಾಣಿಕರ ಸಂಖ್ಯೆಯನ್ನು ನಮೂದಿಸುವುದು.

**ಘಟಕ ಮಟ್ಟದಲ್ಲಿನ ಜವಾಬ್ದಾರಿಗಳು**

1. ಕೆಲವು ಆಯ್ದ ಅಂತರ ರಾಜ್ಯ ಸಾರಿಗೆಗಳನ್ನು ಹೊರತುಪಡಿಸಿ ಉಳಿದ ದೂರ ಮಾರ್ಗದ ಅಂತರರಾಜ್ಯ ಸಾರಿಗೆಗಳಲ್ಲಿ ಮಹಿಳೆಯರು ಉಚಿತವಾಗಿ ಪ್ರಯಾಣಿಸಲು ಅವಕಾಶವಿರುವುದಿಲ್ಲ. ಈ ಬಗ್ಗೆ **"ಅಂತರ ರಾಜ್ಯ ಸಾರಿಗೆಗಳಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣ ಅವಕಾಶವಿಲ್ಲ"** ಎಂದು ಎದ್ದು ಕಾಣುವಂತೆ ವಾಹನದ ಬಾಗಿಲು ಮುಂಭಾಗದ ಮೇಲೆ ಸ್ಟಿಕರಿಂಗ್ ಮಾಡಿಸಿ ಹಾಕುವುದು.
2. ಘಟಕದಲ್ಲಿ ಎಸ್‌ಟಿ-2 ನಲ್ಲಿ ಅನುಸೂಚಿವಾರು ಸಾರಿಗೆ ಆದಾಯ ನಮೂದಿಸುವ ಕಾಲಂ ಪಕ್ಕದಲ್ಲಿ ನಿರ್ವಾಹಕರು ವೇಬಿಲ್‌ನಲ್ಲಿ ನಮೂದಿಸಿರುವ ಹಂತವಾರು/ಸರತಿವಾರು ಪ್ರಯಾಣಿಸಿರುವ ಒಟ್ಟು ಮಹಿಳಾ ಪ್ರಯಾಣಿಕರ ಸಂಖ್ಯೆಯನ್ನು ನಮೂದಿಸುವುದು.

3. ಘಟಕದಲ್ಲಿ ದಿನಾಂಕವಾರು/ಅನುಸೂಚಿವಾರು/ಸರತಿವಾರು ಪ್ರಯಾಣಿಸಿರುವ ಮಹಿಳಾ ಪ್ರಯಾಣಿಕರ ಸಂಖ್ಯೆ, ಟಿಕೇಟ್ ಮೊತ್ತ, ಇತ್ಯಾದಿ ವಿವರಗಳುಳ್ಳ ವರದಿಗಳನ್ನು ತಂತ್ರಾಂಶದ ಮುಖಾಂತರ ಪಡೆದು ಪ್ರತಿ ತಿಂಗಳು ವಿಭಾಗೀಯ ಕಛೇರಿಗೆ ಕಳುಹಿಸುವುದು.
4. ಘಟಕ ವ್ಯವಸ್ಥಾಪಕರು/ಸಂಚಾರ ಮೇಲ್ವಿಚಾರಕರು/ಅಧಿಕಾರಿಗಳು ಮಹಿಳೆಯರಿಗೆ ಒದಗಿಸಲಾಗಿರುವ ಉಚಿತ ಸಾರಿಗೆ ಸೌಲಭ್ಯದ ಬಗ್ಗೆ ಚಾಲನಾ ಸಿಬ್ಬಂದಿಗಳ ಗಮನಕ್ಕೆ ತಂದು ಶಕ್ತಿ ಯೋಜನೆಯ ಬಗ್ಗೆ ಕರ್ನಾಟಕ ಸರ್ಕಾರದಿಂದ ಹೊರಡಿಸಿರುವ ಆದೇಶ, ನಿಯಮಗಳ ಕುರಿತು ಸೂಕ್ತ ತಿಳುವಳಿಕೆ/ನಿರ್ದೇಶನಗಳನ್ನು ನೀಡುವುದು.
5. ಮಾರ್ಗ ಮಧ್ಯದಲ್ಲಿ ಇ.ಟಿ.ಎಂ ಯಂತ್ರಗಳು ದುರಸ್ಥಿಗೊಂಡಲ್ಲಿ, ಮ್ಯಾನುಯಲ್ ಲಗೇಜು ಟಿಕೇಟ್ ಮಾದರಿಯಲ್ಲಿ ಪಿಂಕ್ ಚೀಟಿಗಳನ್ನು ಎಲ್ಲಾ ನಿರ್ವಾಹಕರಿಗೆ/ಚಾಲಕ ಕಂ ನಿರ್ವಾಹಕರಿಗೆ ವಿತರಿಸುವುದು ಮತ್ತು ಇವುಗಳನ್ನು ಇ.ಟಿ.ಎಂ ಯಂತ್ರ ಕೆಟ್ಟು ಹೋದ ಪಕ್ಷದಲ್ಲಿ ಮಾತ್ರ ಮಹಿಳಾ ಪ್ರಯಾಣಿಕರಿಗೆ ನೀಡುವಂತೆ ಸೂಕ್ತ ನಿರ್ದೇಶನ ನೀಡುವುದು ಮತ್ತು ಸದರಿ ಪಿಂಕ್ ಚೀಟಿಗಳು ಘಟಕದಲ್ಲಿ ಸಾಕಷ್ಟು ಲಭ್ಯವಿರುವಂತೆ ಎಚ್ಚರವಹಿಸಿ ನಿಗಮದ ಮುದ್ರಣಾಲಯದಿಂದ ಪಡೆದುಕೊಳ್ಳುವುದು ಮತ್ತು ಇದರ ಲೆಕ್ಕಗಳನ್ನು ಪ್ರತ್ಯೇಕ ರಿಜಿಸ್ಟರ್‌ನಲ್ಲಿ ನಿರ್ವಹಿಸುವುದು.

## ವಿಭಾಗ ಮಟ್ಟದಲ್ಲಿನ ಜವಾಬ್ದಾರಿಗಳು

1. ಶಕ್ತಿ ಯೋಜನೆಯಡಿ ಬಸ್ಸುಗಳಲ್ಲಿ ಉಚಿತ ಪ್ರಯಾಣ ಸೌಲಭ್ಯವನ್ನು ಪಡೆದ ಮಹಿಳೆಯರ ವಿವರಗಳನ್ನು ವಿಭಾಗಗಳ ವಿಭಾಗೀಯ ನಿಯಂತ್ರಣಾಧಿಕಾರಿಗಳು, ವಿಭಾಗೀಯ ಸಂಚಾರ ಅಧಿಕಾರಿ ಹಾಗೂ ಲೆಕ್ಕಪತ್ರ ಅಧಿಕಾರಿಗಳ ಧೃಢೀಕರಣದೊಂದಿಗೆ, ಈ ಕೆಳಕಂಡ ನಮೂನೆಯಲ್ಲಿ ಮಾಹಿತಿಯನ್ನು ಕ್ರೋಢೀಕರಿಸಿ ಪ್ರತಿ ತಿಂಗಳು 5 ನೇ ದಿನಾಂಕದೊಳಗೆ ಕೇಂದ್ರ ಕಛೇರಿಯ ಸಂಚಾರ (ವಾಣಿಜ್ಯ) ಇಲಾಖೆಗೆ ಕಳುಹಿಸುವುದು.

| | | | ಮಹಿಳಾ ಪ್ರಯಾಣಿಕರ ಸಂಖ್ಯೆ | | | |
|---|---|---|---|---|---|---|
| ಮಾಹೆ | ವಿಭಾಗ | ಸಾರಿಗೆ ವರ್ಗ | ವಯಸ್ಕರು | ಮಕ್ಕಳು | ಒಟ್ಟು | ಪ್ರಯಾಣ ದರ (ಒಟ್ಟು ಮೊತ್ತ)* |
| | | ನಗರ<br>ಸಾಮಾನ್ಯ<br>ವೇಗದೂತ | | | | |

*ಅಪನಿ & ಟೋಲ್ ಶುಲ್ಕಗಳು ಸೇರಿದಂತೆ

2. ಮಾರ್ಗ ಮಧ್ಯದಲ್ಲಿ ಇ.ಟಿ.ಎಂ ಯಂತ್ರಗಳು ದುರಸ್ಥಿಗೊಂಡಲ್ಲಿ, ಮ್ಯಾನುಯಲ್ ಲಗೇಜು ಟಿಕೇಟ್ ಮಾದರಿಯಲ್ಲಿ ಪಿಂಕ್ ಚೀಟಿಗಳನ್ನು ಎಲ್ಲಾ ನಿರ್ವಾಹಕರಿಗೆ/ಚಾಲಕ ಕಂ ನಿರ್ವಾಹಕರಿಗೆ ವಿತರಿಸುವ ಸಂಬಂಧ ಅವಶ್ಯ ಟಿಕೇಟುಗಳು ವಿಭಾಗದಲ್ಲಿ ಲಭ್ಯವಿರುವಂತೆ ಕೇಂದ್ರ ಕಛೇರಿ ಮುದ್ರಣಾಲಯರವರೊಂದಿಗೆ ಸಂಪರ್ಕಿಸಿಕೊಳ್ಳುವುದು.

## ಕೇಂದ್ರ ಕಛೇರಿ ಗಣಕ ಇಲಾಖೆ

1. ಗಣಕ ಇಲಾಖೆಯವರು ನಿಗಮದ ಎಲ್ಲಾ ಸಾಮಾನ್ಯ, ನಗರ ಸಾರಿಗೆ ಮತ್ತು ವೇಗದೂತ(ತಡೆರಹಿತ ಸಾರಿಗೆಗಳು ಒಳಗೊಂಡಂತೆ) ಸಾರಿಗೆಗಳಲ್ಲಿ ಮಾತ್ರ ಕರ್ನಾಟಕ ರಾಜ್ಯದ ವ್ಯಾಪ್ತಿಯಲ್ಲಿ ವಾಸಿಸುತ್ತಿರುವ ಮಹಿಳಾ ಪ್ರಯಾಣಿಕರಿಗೆ(6 ವರ್ಷದಿಂದ 12 ವರ್ಷದವರೆಗಿನ ಬಾಲಕಿಯರು ಮತ್ತು ಲಿಂಗತ್ವ ಅಲ್ಪಸಂಖ್ಯಾತರು ಸೇರಿದಂತೆ) ರಾಜ್ಯದ ಒಳಗೆ ಉಚಿತವಾಗಿ ಪ್ರಯಾಣಿಸಲು ಅನುವಾಗುವಂತೆ ಇ.ಟಿ.ಎಂ ಯಂತ್ರಗಳಲ್ಲಿ ಎಲ್ಲಾ ಹಂತ/ಉಪಹಂತ/ಸ್ಥಳವಾರು ಅನ್ವಯಿಸುವ ಪ್ರಯಾಣದ ಟಿಕೇಟ್ ದರಗಳನ್ನು "ಶೂನ್ಯ"(zero) ಮೊತ್ತದ ಟಿಕೇಟುಗಳು ಬರುವಂತೆ ಸೂಕ್ತ ಮಾರ್ಪಾಡು ಮಾಡುವುದು.

..5

2. ಅನುಬಂಧ-1 ಮತ್ತು ಅನುಬಂಧ-2ರಲ್ಲಿ ನಮೂದಿಸಿರುವ ಕೆಲವು ಆಯ್ದ ಅಂತರ ರಾಜ್ಯ ಸಾರಿಗೆಗಳಲ್ಲಿಯೂ ಸಹ ಅಂಶ-1ರಲ್ಲಿ ತಿಳಿಸಿರುವಂತೆ ಉಚಿತವಾಗಿ ಪ್ರಯಾಣಿಸಲು ಅನುವಾಗುವಂತೆ ಇ.ಟಿ.ಎಂ ಯಂತ್ರಗಳಲ್ಲಿ ಸೂಕ್ತ ಮಾರ್ಪಾಡು ಮಾಡುವುದು.
3. ಒಂದು ಗುಂಪಿನಲ್ಲಿ ಪ್ರಯಾಣಿಸುವ ಮಹಿಳಾ ಪ್ರಯಾಣಿಕರ(6 ವರ್ಷದಿಂದ 12 ವರ್ಷದವರೆಗಿನ ಬಾಲಕಿಯರು ಮತ್ತು ಲಿಂಗತ್ವ ಅಲ್ಪ ಸಂಖ್ಯಾತರು ಸೇರಿದಂತೆ) ಪ್ರಯಾಣದ ಟಿಕೇಟ್‌ಗಳಲ್ಲಿ ಮಹಿಳಾ ಪ್ರಯಾಣಿಕರಿಗೆ "ಶೂನ್ಯ"ಮೊತ್ತ ಎಂದು ತೋರಿಸಿ, ಅವರು ಎಲ್ಲಿಂದ ಎಲ್ಲಿಗೆ ಪ್ರಯಾಣಿಸುತ್ತಿದ್ದಾರೆ, ಮಹಿಳಾ ಪ್ರಯಾಣಿಕರ ಸಂಖ್ಯೆ ಒಟ್ಟು ಪ್ರಯಾಣದ ಮೊತ್ತ ಮುಂತಾದ ವಿವರಗಳು ಟಿಕೇಟುಗಳಲ್ಲಿ ಬರುವಂತೆ ಅವಶ್ಯ ಕ್ರಮ ವಹಿಸುವುದು ಹಾಗೂ ಈ ಬಗ್ಗೆ ಎಲ್ಲಾ ವಿಭಾಗಗಳಿಗೆ ಮತ್ತು ನಿರ್ವಾಹಕರಿಗೆ ಸೂಕ್ತ ಮಾಹಿತಿ ನೀಡುವ ವ್ಯವಸ್ಥೆ ಮಾಡುವುದು.
4. ಮಹಿಳಾ ಪ್ರಯಾಣಿಕರು ಎಲ್ಲಿಂದ ಎಲ್ಲಿಗೆ ಪ್ರಯಾಣಿಸಿದ್ದಾರೆ, ಪ್ರಯಾಣಿಸಿದ ಮಹಿಳೆಯರ ಸಂಖ್ಯೆ, ಪ್ರಯಾಣ ದರ ಒಟ್ಟು ಮೊತ್ತ ಮುಂತಾದ ಮಾಹಿತಿ ಇ.ಟಿ.ಎಂ reports ಮತ್ತು DCS ತಂತ್ರಾಂಶದಲ್ಲಿ ಲಭ್ಯವಾಗುವಂತೆ ಕ್ರಮ ಕೈಗೊಳ್ಳುವುದು.
5. ACC-66ನಲ್ಲಿ ಮಹಿಳೆಯರ ಪ್ರಯಾಣದ ಗಳಿಕೆಯಿಂದ ಬರುವ ಆದಾಯವನ್ನು ದಾಖಲಿಸಿ ಅದೇ ಮೊತ್ತವನ್ನು ಕಡಿತದಲ್ಲಿ ತೋರಿಸುವ ಕುರಿತು ಅವಶ್ಯಕ ಮಾರ್ಪಡು ಮಾಡುವುದು.
6. ಪ್ರತಿ ದಿನ ಪ್ರಯಾಣಿಸುವ ಮಹಿಳಾ ಪ್ರಯಾಣಿಕರ ಸಂಖ್ಯೆ ಮತ್ತು ಮೊತ್ತದ ವಿವರವನ್ನು ಪ್ರತಿ ದಿನ **Dashboard**ನಲ್ಲಿ ಮಾಹಿತಿ ಲಭ್ಯವಾಗುವಂತೆ ತಂತ್ರಾಂಶವನ್ನು ಅಭಿವೃದ್ಧಿಪಡಿಸುವುದು.

**ಕೇಂದ್ರ ಕಛೇರಿ ಸಂಚಾರ(ವಾಣಿಜ್ಯ) ಇಲಾಖೆ**

ಸಂಚಾರ ವಾಣಿಜ್ಯ ಇಲಾಖೆಯವರು ವಿವಿಧ ವಿಭಾಗಗಳಿಂದ ಸ್ವೀಕರಿಸಿದ ಮಾಹಿತಿಯನ್ನು ಕ್ರೋಢೀಕರಿಸಿ ಸಹಾಯಧನ ಮೊತ್ತ ಬಿಡುಗಡೆಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವುದು.

ಅವತಾರ್ ತಂತ್ರಾಂಶದಲ್ಲಿ ಮುಂಗಡ ಆಸನ ಕಾಯ್ದಿರಿಸುವ ಬಗ್ಗೆ:

- ಶಕ್ತಿ ಯೋಜನೆ ಸೌಲಭ್ಯದ ಮೂಲಕ ಮಹಿಳಾ ಫಲಾನುಭವಿಗಳಿಗೆ ಉಚಿತ ಪ್ರಯಾಣಕ್ಕಾಗಿ ಅವತಾರ್ ತಂತ್ರಾಂಶದಲ್ಲಿ ಮುಂಗಡ ಆಸನ ಕಾಯ್ದಿರಿಸಲು ನಿಗಮದ ಬುಕಿಂಗ್ ಕೌಂಟರ್ ಗಳಲ್ಲಿ ರಾಜ್ಯದೊಳಗಿನ ವೇಗದೂತ ಸಾರಿಗೆಗಳಿಗೆ ಪ್ರತಿ ಸಾರಿಗೆ ಸೇವೆಗೆ 50% ಆಸನಗಳನ್ನು ಮೀರದಂತೆ ಮುಂಗಡ ಆಸನ ಕಾಯ್ದಿರಿಸುವ ವ್ಯವಸ್ಥೆಯನ್ನು ಕಲ್ಪಿಸುವುದು.
- ಕೌಂಟರ್‌ನ ಸಿಬ್ಬಂದಿಗಳು ಮಹಿಳಾ ಪ್ರಯಾಣಿಕರ ಶಕ್ತಿ ಸ್ಮಾರ್ಟ್ ಕಾರ್ಡು/ಗುರುತಿನ ಚೀಟಿಯನ್ನು ಪರಿಶೀಲಿಸಿ (ಕರ್ನಾಟಕ ರಾಜ್ಯದ ನಿವಾಸಿಗಳಿಗೆ ಮಾತ್ರ) ವಿವರವನ್ನು ನಮೂದಿಸಿ, ನಿಗದಿತ ಮುಂಗಡ ಕಾಯ್ದಿರಿಸುವ ಶುಲ್ಕ ಪಡೆದು ಟಿಕೇಟನ್ನು ನೀಡುವುದು.
- ಫಲಾನುಭವಿಗಳು, ಪ್ರಯಾಣದ ಸಮಯದಲ್ಲಿ ಮುಂಗಡ ಆಸನ ಕಾಯ್ದಿರಿಸಿದ ಟಿಕೇಟು ಹಾಗೂ ಗುರುತಿನ ಚೀಟಿಯನ್ನು ಕಡ್ಡಾಯವಾಗಿ ತೋರಿಸುವುದು, ಗುರುತಿನ ಚೀಟಿಯನ್ನು ಹೊಂದದಿರುವ ಮಹಿಳಾ ಫಲಾನುಭವಿಗಳು ಪೂರ್ಣ ಪ್ರಯಾಣದರ ಪಾವತಿಸಿ ಪ್ರಯಾಣಿಸುವುದು.
- ಮುಂಗಡ ಆಸನ ಕಾಯ್ದಿರಿಸಿದ ಮಹಿಳಾ ಪ್ರಯಾಣಿಕರು ಪ್ರಯಾಣ ರದ್ದುಪಡಿಸಿಕೊಳ್ಳಲು ಇಚ್ಛಿಸಿದ್ದಲ್ಲಿ, ಸದರಿ ಮುಂಗಡ ಆಸನ ಕಾಯ್ದಿರಿಸಿದ ಟಿಕೇಟನ್ನು ಕೌಂಟರ್‌ಗೆ ಬಂದು ರದ್ದುಗೊಳಿಸಿಕೊಳ್ಳುವುದು ಹಾಗೂ ಮುಂಗಡ ಕಾಯ್ದಿರಿಸುವ ಶುಲ್ಕ ಹಿಂದಿರುಗಿಸುವುದಿಲ್ಲ.
- ಶಕ್ತಿ ಯೋಜನೆಯಡಿಯಲ್ಲಿ ಮುಂಗಡ ಆಸನ ಕಾಯ್ದಿರಿಸಿದ ಪ್ರಯಾಣಿಕರ ಮಾಹಿತಿಯನ್ನು ಕ್ರೋಢೀಕರಿಸಿ ಪ್ರತಿ ತಿಂಗಳು 05 ನೇ ದಿನಾಂಕದೊಳಗೆ ಕೇಂದ್ರ ಕಛೇರಿಯ ಸಂಚಾರ (ವಾಣಿಜ್ಯ) ಇಲಾಖೆಗೆ ಕಳುಹಿಸುವುದು.

**ಕ.ರಾ.ಸಾ ಮುದ್ರಣಾಲಯ**

ಮಾರ್ಗ ಮಧ್ಯೆದಲ್ಲಿ ಇ.ಟಿ.ಎಂ ಯಂತ್ರಗಳು ದುರಸ್ಥಿಗೊಂಡಲ್ಲಿ ನಿರ್ವಾಹಕರು ಮಹಿಳಾ ಪ್ರಯಾಣಿಕರಿಗೆ "ಶೂನ್ಯ" ಮೊತ್ತದ ಟಿಕೇಟ್ ನೀಡಲು ಖಾಲಿ ಇರುವ ಲಗೇಜು ಚೀಟಿ ಮಾದರಿಯಲ್ಲಿ ಪ್ರತ್ಯೇಕ, ಪಿಂಕ್ ಬಣ್ಣದ ಚೀಟಿಗಳನ್ನು ಘಟಕವಾರು/ವಿಭಾಗವಾರು ಸಲ್ಲಿಸುವ indent ಆಧಾರದ ಮೇಲೆ ಮುದ್ರಿಸಲು ಕ್ರಮ ವಹಿಸುವುದು ಮತ್ತು ಈ ಬಗ್ಗೆ ಪ್ರತ್ಯೇಕ ಲೆಕ್ಕಪುಸ್ತಕ ಇರಿಸುವುದು.

**ವಿಭಾಗ/ಕೇಂದ್ರ ತನಿಖಾದಳಗಳು ಕೈಗೊಳ್ಳಬೇಕಾದ ಕ್ರಮ**

ಸಾಮಾನ್ಯ/ನಗರ ಸಾರಿಗೆ/ವೇಗದೂತ ಸಾರಿಗೆಗಳಲ್ಲಿ ತನಿಖೆ ಮಾಡುವಾಗ ನಿರ್ವಾಹಕರು ಕರ್ನಾಟಕ ಮಹಿಳಾ ನಾಗರಿಕರಿಗೆ "ಶೂನ್ಯ" ಮೊತ್ತದ ಮಹಿಳೆಯರ ಉಚಿತ ಟಿಕೇಟ್ ನೀಡಿರುವ ಬಗ್ಗೆ ಖಾತರಿಪಡಿಸಿಕೊಳ್ಳುವುದು. ನಿರ್ವಾಹಕರು ಕೆಳಕಂಡಂತೆ ನ್ಯೂನತೆಗಳನ್ನು ಎಸಗಿರುವುದು ಕಂಡುಬಂದಲ್ಲಿ ಹಾಲಿ ಇರುವ ಸುತ್ತೋಲೆಯಂತೆ ನಿರ್ವಾಹಕರಿಗೆ ಮೆಮೋ ಜಾರಿ ಮಾಡಿ ವರದಿಗಳನ್ನು ವಿಭಾಗ/ಕೇಂದ್ರ ಕಛೇರಿಯಲ್ಲಿ ಮುಂದಿನ ಕ್ರಮಕ್ಕಾಗಿ ಸಲ್ಲಿಸುವುದು.

| ಕ್ರ.ಸಂ | ಅಂಶ | ಕೈಗೊಳ್ಳಬೇಕಾದ ಕ್ರಮ |
|---|---|---|
| 1 | ಬಸ್ಸಿನಲ್ಲಿ ಪ್ರಯಾಣಿಸುತ್ತಿರುವ ಮಹಿಳಾ ಪ್ರಯಾಣಿಕರ ವಾಸ್ತವ ಸಂಖ್ಯೆಗಿಂತ ಹೆಚ್ಚಿನ ಸಂಖ್ಯೆಯ ಮಹಿಳಾ ಪ್ರಯಾಣಿಕರ ಚೀಟಿಯನ್ನು ನಿರ್ವಾಹಕರು ವಿತರಿಸಿರುವುದು ಕಂಡು ಬಂದಲ್ಲಿ | ಸದರಿ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ನಿರ್ವಾಹಕರ ವಿರುದ್ಧ ಸಾಮಾನ್ಯ/ ನಗರ ಸಾರಿಗೆಗಳಲ್ಲಿ ಗಂಭೀರ ಪ್ರಕರಣವೆಂದು ಹಾಗೂ ವೇಗದೂತ ಸಾರಿಗೆಗಳಲ್ಲಿ ಅತಿ ಗಂಭೀರ ಪ್ರಕರಣ ಎಂದು ದಾಖಲಿಸುವುದು. |
| 2 | ಬಸ್ಸುಗಳಲ್ಲಿ ಪ್ರಯಾಣಿಸುವ ಕರ್ನಾಟಕ ರಾಜ್ಯದ ಮಹಿಳಾ ಪ್ರಯಾಣಿಕರಿಗೆ ನಿರ್ವಾಹಕರು ಉಚಿತ ಟಿಕೇಟು ವಿತರಿಸದೇ ಇದ್ದ ಪಕ್ಷದಲ್ಲಿ | ಪ್ರಯಾಣಿಕರಿಂದ ದಂಡ ವಸೂಲು ಮಾಡದೇ ನ್ಯೂನತೆಗಳ ವಿವರಗಳೊಂದಿಗೆ ನಿರ್ವಾಹಕರಿಗೆ ನಿಯಮಾನುಸಾರ ಮೆಮೋ ನೀಡುವುದು. |
| 3 | ಸಾಮಾನ್ಯ/ನಗರ ಸಾರಿಗೆ/ವೇಗದೂತ ಸಾರಿಗೆಗಳಲ್ಲದೆ ಬೇರೆ ಪ್ರತಿಷ್ಠಿತ ಸಾರಿಗೆಗಳಲ್ಲಿ ಉಚಿತ ಪ್ರಯಾಣ ಟಿಕೇಟ್ ನೀಡಿರುವ ಅಥವಾ ಪಿಂಕ್ ಚೀಟಿ ನೀಡಿರುವುದು ಕಂಡು ಬಂದಲ್ಲಿ | ಪ್ರಯಾಣಿಕರಿಂದ ದಂಡ ವಸೂಲು ಮಾಡದೇ ನ್ಯೂನತೆಗಳ ವಿವರಗಳೊಂದಿಗೆ ನಿರ್ವಾಹಕರಿಗೆ ನಿಯಮಾನುಸಾರ ಮೆಮೋ ನೀಡುವುದು. |
| 4 | ಪುರುಷ ಪ್ರಯಾಣಿಕರಿಗೆ ಮಹಿಳಾ ಪ್ರಯಾಣಿಕ ಉಚಿತ ಟಿಕೆಟ್ ಅನ್ನು ವಿತರಿಸಿದ್ದಲ್ಲಿ | ಪ್ರಯಾಣಿಕರಿಂದ ದಂಡ ವಸೂಲು ಮಾಡದೇ ನ್ಯೂನತೆಗಳ ವಿವರಗಳೊಂದಿಗೆ ನಿರ್ವಾಹಕರಿಗೆ ನಿಯಮಾನುಸಾರ ಮೆಮೋ ನೀಡುವುದು. |
| 5 | ಬೇರೆ ರಾಜ್ಯದ ಮಹಿಳೆಯರಿಗೆ ಮಹಿಳಾ ಪ್ರಯಾಣಿಕ ಉಚಿತ ಟಿಕೆಟ್ ಅನ್ನು ವಿತರಿಸಿದ್ದಲ್ಲಿ | ಪ್ರಯಾಣಿಕರಿಂದ ದಂಡ ವಸೂಲು ಮಾಡದೇ ನ್ಯೂನತೆಗಳ ವಿವರಗಳೊಂದಿಗೆ ನಿರ್ವಾಹಕರಿಗೆ ನಿಯಮಾನುಸಾರ ಮೆಮೋ ನೀಡುವುದು. |

...7

** ಕ್ರ.ಸಂ-2, 3, 4 & 5 ರಲ್ಲಿ ತಿಳಿಸಿರುವಂತೆ ನಮೂದಾಗುವ ಪ್ರಕರಣಗಳ ಸಾರಿಗೆ ಅದಾಯ ಸೋರಿಕೆ ಮೊತ್ತವನ್ನು ಗಣನೆಗೆ ತೆಗೆದುಕೊಂಡು ಹಾಲಿ ಜಾರಿಯಲ್ಲಿರುವ ಸಾಮಾನ್ಯ ಸ್ಥಾಯಿ ಆದೇಶದಂತೆ ಸಾಮಾನ್ಯ/ಗಂಭೀರ ಪ್ರಕರಣ/ ಅತಿ ಗಂಭೀರ ಪ್ರಕರಣ ಎಂದು ಪರಿಗಣಿಸುವುದು.

**ಬಸ್ ನಿಲ್ದಾಣಾಧಿಕಾರಿಗಳ ಜವಾಬ್ದಾರಿಗಳು:**

ಬಸ್ ನಿಲ್ದಾಣಗಳಲ್ಲಿ ಕರ್ತವ್ಯ ನಿರ್ವಹಿಸುವ ಮೇಲ್ವಿಚಾರಕ ಸಿಬ್ಬಂದಿ/ಅಧಿಕಾರಿಗಳು ಮಹಿಳಾ ಪ್ರಯಾಣಿಕರಿಗೆ ಉಚಿತ ಪ್ರಯಾಣ ಸೌಲಭ್ಯ ಒದಗಿಸಿರುವ ಬಗ್ಗೆ ಯಾವುದೇ ಗೊಂದಲಗಳು ಕಂಡು ಬಂದಲ್ಲಿ ಚಾಲನಾ ಸಿಬ್ಬಂದಿಗೆ ಸೂಕ್ತ ತಿಳುವಳಿಕೆ ನೀಡುವುದು ಹಾಗೂ ಯಾವುದೇ ದೂರುಗಳಿಗೆ ಅವಕಾಶ ನೀಡದೇ ಕರ್ತವ್ಯ ನಿರ್ವಹಿಸಲು ಚಾಲನಾ ಸಿಬ್ಬಂದಿಗಳಿಗೆ ಸೂಕ್ತ ತಿಳುವಳಿಕೆ ನೀಡುವುದು.

**ಸಾರಿಗೆ ಆದಾಯದ ಮೇಲೆ ನಿರ್ವಾಹಕರಿಗೆ ಪ್ರೋತ್ಸಾಹಧನ(Incentive)**

ಸಾರಿಗೆ ಕಾರ್ಯಾಚರಣೆಯ ಸಮಯದಲ್ಲಿ ನಿರ್ವಾಹಕರು ಹಣ ಪಡೆದು ವಿತರಿಸಿದ ಟಿಕೇಟ್‌ಗಳ ಮೊತ್ತ, ಮುಂಗಡ ಕಾಯ್ದಿರಿಸಿದ ಆಸನಗಳ ಮೊತ್ತ ಮತ್ತು ಮಹಿಳೆಯರಿಗೆ ನೀಡುವ ಉಚಿತ ಟಿಕೆಟ್ ವಿತರಣೆಯಿಂದ ಬಂದ ಸಾರಿಗೆ ಆದಾಯದ ಮೇಲೆ ಹಾಲಿ ಇರುವ ನಿಯಮಾವಳಿಯನ್ವಯ ನಿರ್ವಾಹಕರಿಗೆ ಪ್ರೋತ್ಸಾಹಧನ ನೀಡುವುದು

**ತರಬೇತಿ**

ಸದರಿ ಯೋಜನೆಯ ಕುರಿತು ಮತ್ತು ಈ ಸಾಮಾನ್ಯ ಸ್ಥಾಯಿ ಆದೇಶದಲ್ಲಿನ ಅಂಶಗಳ ಬಗ್ಗೆ ಘಟಕ ವ್ಯವಸ್ಥಾಪಕರು, ಎಲ್ಲಾ ಮೇಲ್ವಿಚಾರಕ ಸಿಬ್ಬಂದಿ, ಬಸ್ ನಿಲ್ದಾಣದ ಸಿಬ್ಬಂದಿಗಳು ಹಾಗೂ ವಿಶೇಷವಾಗಿ ಚಾಲಕ ಮತ್ತು ನಿರ್ವಾಹಕರುಗಳಿಗೆ ವಿಶೇಷ ತರಬೇತಿ ನೀಡುವುದು. ಈ ಯೋಜನೆಯ ಅನುಷ್ಠಾನದಲ್ಲಿ ಯಾವುದೇ ಲೋಪ ದೋಷಗಳು ಬಾರದಂತೆ ಎಚ್ಚರವಹಿಸುವುದು

ಯೋಜನೆಯ ಅನುಷ್ಠಾನದಲ್ಲಿ ಪ್ರಯಾಣಿಕರ ಹಾಗೂ ನಿರ್ವಾಹಕರ ನಡುವೆ ಯಾವುದೇ ರೀತಿಯ ಅಹಿತಕರ ಘಟನೆಗಳಿಗೆ ಅವಕಾಶ ನೀಡದಂತೆ ಕೇಂದ್ರ ಕಛೇರಿಯ ಉಸ್ತುವಾರಿ ಅಧಿಕಾರಿಗಳು/ವಿಭಾಗದ ಅಧಿಕಾರಿಗಳು ಘಟಕಗಳಿಗೆ ಭೇಟಿ ನೀಡಿ ಚಾಲನಾ ಸಿಬ್ಬಂದಿಗಳಿಗೆ ಅಗತ್ಯ ತಿಳುವಳಿಕೆಯನ್ನು ನೀಡುವುದು/ ಸಿಬ್ಬಂದಿಗಳನ್ನು ಉದ್ದೇಶಿಸಿ ಮಾತನಾಡಿ ಸೂಕ್ತ ತಿಳುವಳಿಕೆಯನ್ನು ನೀಡುವುದು.

ಈ ಸಾಮಾನ್ಯ ಸ್ಥಾಯಿ ಆದೇಶ ದಿನಾಂಕ: 11.06.2023 ರಿಂದ ಜಾರಿಗೆ ಬರುತ್ತದೆ. ಸಂಬಂಧಪಟ್ಟ ಎಲ್ಲರೂ ಮೇಲ್ಕಂಡ ಸೂಚನೆಗಳನ್ನು ಪಾಲಿಸುವುದು ಹಾಗೂ ಯಾವುದೇ ದೂರುಗಳಿಗೆ ಅವಕಾಶ ನೀಡದಂತೆ ಎಚ್ಚರ ವಹಿಸುವುದು.

**ವ್ಯವಸ್ಥಾಪಕ ನಿರ್ದೇಶಕರು**
**ಕರಾರಸಾ ನಿಗಮ**

**ಪ್ರತಿಯನ್ನು:**

1. ವ್ಯವಸ್ಥಾಪಕ ನಿರ್ದೇಶಕರು, ಬೆಮಸಾಸಂ/ವಾಕರಸಾಸಂ/ಕಕರಸಾನಿ ರವರಿಗೆ ಮಾಹಿತಿಗಾಗಿ.
2. ಮುಖ್ಯ ಸಂಚಾರ ವ್ಯವಸ್ಥಾಪಕರು, ಬೆಮಸಾಸಂ/ವಾಕರಸಾಸಂ/ಕಕರಸಾನಿ ರವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
3. ಎಲ್ಲಾ ಇಲಾಖಾ ಮುಖ್ಯಸ್ಥರು, ಕರಾರಸಾನಿ, ಕೇಂದ್ರ ಕಛೇರಿ, ಬೆಂಗಳೂರು ರವರ ಮಾಹಿತಿಗಾಗಿ.

4. ಎಲ್ಲಾ ಹಿರಿಯ/ವಿಭಾಗ ನಿಯಂತ್ರಣಾಧಿಕಾರಿಗಳು, ಕರಾರಸಾನಿ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
5. ಪ್ರಾಂಶುಪಾಲರು/ಕಾರ್ಯ ವ್ಯವಸ್ಥಾಪಕರು, ಕರಾರಸಾನಿಗಮ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
6. ವಿಭಾಗ ಸಂಚಲನಾಧಿಕಾರಿ, ಕರಾರಸಾ ನಿಗಮ, ಅವತಾರ್ ಶಾಖೆ, ಕೇಂದ್ರ ಕಛೇರಿ, ಬೆಂಗಳೂರು ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
7. ಹಿರಿಯ/ಆಪ್ತ ಕಾರ್ಯದರ್ಶಿ, ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು (ಸಿ:ಜಾ)/ ಕರಾರಸಾ ನಿಗಮ, ಕೇಂದ್ರ ಕಛೇರಿ, ಬೆಂಗಳೂರು ರವರ ಮಾಹಿತಿಗಾಗಿ

Annexure-1

KSRTC Inter-state Enclave Routes

| Sl. No. | Route | | Via Places in Inter-state |
|---|---|---|---|
| | From | To | |
| 1 | Bengaluru | Devadurga | Obalapuram, D. Hirehal |
| 2 | Bengaluru | Thirumani | Madaksira |
| 3 | Bengaluru | Lingadahalli | Madaksira |
| 4 | Bengaluru | Y.N.Hosakote | Madaksira |
| 5 | Bengaluru | Pavagada | Madaksira |
| 6 | Chikkaballapura | Kasinayakanahalli | Sugur |
| 7 | Chinthamani | Kasinayakanahalli | Sugur |
| 8 | Gowribidanur | Kasinayakanahalli | Sugur |
| 9 | Gowribidanur | Pavagada | I.D.Halli |
| 10 | Doddaballapur | Pavagada | I.D.Halli |
| 11 | Doddaballapur | Kasinayakanahalli | Sugur |
| 12 | Sidlaghatta | Kasinayakanahalli | Sugur |
| 13 | Tumakuru | Pavagada | Madakasira |
| 14 | Bengaluru | Pavagada | Madakasira |
| 15 | Sira | Pavagada | Amarapura |
| 16 | Chamarajanagar | Talwadi | State Border |
| 17 | Chamarajanagar | Talwadi | State Border |
| 18 | Chamarajanagar | Kongallibetta | Baiyanpura, Palyam |
| 19 | Gundlupet | Kongallibetta | Yathibetta, Chimmathanahalli |
| 20 | KGF | Panthanahalli | V. Kota |
| 21 | Mulbagilu | Panthanahalli | V. Kota |
| 22 | KGF | Rajpet Road | Shantipuram |
| 23 | Chitradurga | Ballari | D Hirehal |
| 24 | Pavagada | Bengaluru | Gowripur, Chandrabavi |
| 25 | Pavagada | Hiriyuru | Chilakanadu |
| 26 | Pavagada | Mysuru | Gowripur, Chandrabavi |
| 27 | Pavagada | Sira | Chilakanadu |
| 28 | Pavagada | Tumakuru | Gowripur, Chandrabavi |
| 29 | Puttur | Sulya | Adooru, Mandekolu |
| 30 | Puttur | Puttur | Eshwarmangala, Pallaturu, Kotyadi |
| 31 | Puttur | Puttur | Eshwarmangala, Galimukha, Kuntaru |
| 32 | Puttur | Delampady | Kavu, Menasinakana |

Annexure-2

KSRTC Solitary Inter-state Routes:

| Sl. No. | Route | | Via Places in Inter-state |
|---|---|---|---|
| | From | To | |
| 1 | Bengaluru | Rayadurga | Gollapalli |
| 2 | Bengaluru | Rolla | Ratnagiri, G. Gollahalli |
| 3 | Kanakapura | Kotevoor | Urigam |
| 4 | Kanakapura-Kalasipalya | Jinamanth | Urigam |
| 5 | Kanakapura-Kalasipalya | Natrapalya | Anchetti |
| 6 | Kanakapura-Kalasipalya | Hogenakal | Anchetti |
| 7 | Anekal | Javalagere | Thali |
| 8 | Anekal-Kalasipalya | Pennagara | Hosuru |
| 9 | Anekal-Kalasipalya | Kelamangala | Hosuru |
| 10 | Anekal-Kalasipalya | Salivaram | Hosuru |
| 11 | Anekal-Ramanagara | Krishnagiri | Javalagere |
| 12 | Anekal-Hosur | Bengaluru | Hosuru |
| 13 | Gundlupet | Sulthanbatheri | Ponnakuli |
| 14 | Madhugiri | Madaksira | Bhaktarahalli |
| 15 | Pavagada | Hindupura | Hannapalli |
| 16 | Mysuru | Manandwady | Manandwady |
| 17 | Dharmasthala | V. Kota | |
| 18 | Puttur | Manjeshwara | Anekallu |
| 19 | Puttur | Kurchipalla | Bayar |